ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್**98/2022**

ಫಿರ್ಯಾದಿ ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).

ವಿರುದ್ಧ

ಆರೋಪಿಃ ಸಲೀಂ ತಂದೆ ಖಾಸಿಮಸಾಬ ಚೆಲ್ಲಾಳ
ವಯಾಃ **55** ವರ್ಷ, ಉಃ ವ್ಯಾಪಾರ
ಸಾಃ ಶಿವಲಿಂಗ ನಗರ, ಹಾವೇರಿ ತಾಃಜಿಃ ಹಾವೇರಿ .

**:ದೋಷಾರೋಪಣೆ:**

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ ನಿನ್ನ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಮೊದಲನೇಯದಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ವಿದ್ಯುತ್ ಸಂಪರ್ಕವನ್ನು ಕೋರಿ ನಿಮ್ಮ ತಾಯಿಯ ಸಹಿಯನ್ನು ಖೊಟ್ಟಿಯಾಗಿ ಮಾಡಿ ಕಾರಣ ಭಾರತೀಯ ದಂಡ ಸಂಹಿತೆ ಕಲಂ ***420*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ?

ಎರಡನೇಯದಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಮತ್ತು ಹೆಸ್ಕಾಂ ಉಪ ವಿಭಾಗ ಇವರಿಗೆ ಮೋಸ ಮಾಡಿ ನಿಮ್ಮ ತಾಯಿವು ಖೈರುನ್ನಬಿ ಇವರು ಜೀವಂತ ಇದ್ದಾರೆ ಅಂತಾ ಬಿಂಬಿಸಿ ಅವರ ಖೊಟ್ಟಿ ಸಹಿಯನ್ನು ಅನುಬಂಧ-1, ವಿದ್ಯುತ್ ಪೂರೈಕೆ ಅರ್ಜಪಿಯಲ್ಲಿ ಸಲ್ಲಿಸಿ, ಅವರ ಖೊಟ್ಟಿ ಸಹಿಯನ್ನು ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ ***471*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಮತ್ತು ಹೆಸ್ಕಾಂ ಉಪ ವಿಭಾಗ ಇವರಿಗೆ ಮೋಸ ಮಾಡಿ ನಿಮ್ಮ ತಾಯಿವು ಖೈರುನ್ನಬಿ ಇರರು ಜೀವಂತ ಇದ್ದಾರೆ ಅಂತಾ ಬಿಂಬಿಸಿ ಅವರ ಖೊಟ್ಟಿ ಸಹಿಯನ್ನು ಅನುಬಂಧ-1, ವಿದ್ಯುತ್ ಪೂರೈಕೆ ಅರ್ಜಿಯ ಲ್ಲಿ ಸಲ್ಲಿಸಿ, ಸರ್ಕಾರಿ ದಾಖಲೆಯಲ್ಲಿ ಖೊಟ್ಟಿಯಾಗಿ ಸಹಿ ಮಾಡಿದ್ದು, ಕಾರಣ

ಭಾರತೀಯ ದಂಡ ಸಂಹಿತೆ ಕಲಂ ***465*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಮತ್ತು ಹೆಸ್ಕಾಂ ಉಪ ವಿಭಾಗ ಇವರಿಗೆ ಮೋಸ ಮಾಡುವ ಉದ್ದೇಶದಿಂದ ನಿಮ್ಮ ತಾಯಿಯವರು ಜೀವಂತ ಇದ್ದಾರೆ ಎಂದು ಬಿಂಬಿಸಿ ಅವಳ ಖೊಟ್ಟಿ ಸಹಿಯನ್ನು ಅನುಬಂಧ 1 ವಿದ್ಯುತ್ ಪೂರೈಕೆ ಅರ್ಜಿಯಲ್ಲಿ ನಿನ್ನ ಮೊಬೈಲ ನಂಬರನ್ನು ನಮೂದಿಸಿ, ನಿನ್ನ ಅರ್ಜಿಯ ಜೊತೆಗೆ ನಿಮ್ಮ ತಾಯಿಯ ಖೊಟ್ಟಿ ಸಹಿಯನ್ನು ಬನಾವಟಿ ಮಾಡಿ, ಅಗ್ರಿಮೆಂಟ್ ಬಾಂಡನ್ನು ನಿಮ್ಮ ಹೆಸ್ಕಾಂ ಉಪ ವಿಭಾಗ ಹಾವೇರಿ ಇವರಿಗೆ ಸಲ್ಲಿಸಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ ***466*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಐದನೇಯದಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಮತ್ತು ಹೆಸ್ಕಾಂ ಇಲಾಖೆಗೆ ಮೋಸ ಮಾಡಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ ***468*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 28.06.2025.

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
**ಸಿಸಿ ನಂಬರ್ 98/2022**
**ದಿನಾಂಕಃ 28.06.2025**

ಫಿರ್ಯಾದಿ ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).

ವಿರುದ್ದ

ಆರೋಪಿ ಸಲೀಂ ತಂದೆ ಖಾಸಿಮಸಾಬ ಚೆಲ್ಲಾಳ
ವಯಾಃ 55 ವರ್ಷ, ಉಃ ವ್ಯಾಪಾರ
ಸಾಃ ಶಿವಲಿಂಗ ನಗರ, ಹಾವೇರಿ ತಾಃಜಿಃ ಹಾವೇರಿ .

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯಸಹಿ: